
## ಇಲ್ಲಿಯವರೆಗೆ



ಹೇಮಂತನನ್ನು ಮದುವೆಯಾಗಬೇಡ ಎಂದು ಚಿಕ್ಕಮ್ಮ ಋತುವಿಗೆ ಹೇಳಿದಾಗ ಆಕೆಗೆ ಬಹಳ ಬೇಸರವಾಗುತ್ತದೆ. ಚಿಕ್ಕಮ್ಮನ ಮನಸ್ಸು ಕಪಟದಿಂದ ಕೂಡಿದ್ದು ಎಂಬುದನ್ನು ಹೇಮಂತ ಗುರುತಿಸುತ್ತಾನೆ. ಬೇಸರ ಕಳೆಯಲೆಂದು ಋತು, ತನ್ನ ತಂದೆ ಹಾಗೂ ಗೆಳತಿ ರಮ್ಯರೊಂದಿಗೆ ಲಾಲ್‌ಬಾಗಿಗೆ ಪಿಕ್‌ನಿಕ್ ಹೋಗಿ ಬರುತ್ತಾರೆ. ಈ ಮಧ್ಯೆ ಋತುವಿಗೆ ತನ್ನ ತಾಯಿ ಹಾಳುಬಾವಿಯಲ್ಲಿ ಬಿದ್ದ ಕೆಟ್ಟ ಕನಸು ಬೀಳುತ್ತದೆ. ಮನಸ್ಸು ಕ್ಷೋಬೆಗೊಳ್ಳುತ್ತದೆ. ಅವಳನ್ನು ಸಮಾಧಾನಪಡಿಸಿದ ರಮ್ಯ ನಾಲ್ಕು ದಿನದ ಮಟ್ಟಿಗೆ ರಮ್ಯಳ ಊರಾದ ನಂದಿಗೆ ಹೋಗಿ ಬರೋಣ ಎನ್ನುತ್ತಾಳೆ. ಇದಕ್ಕೆ ತಂದೆ ಪುರುಷೋತ್ತಮರ ಸಮ್ಮತಿಯೂ ಇರುತ್ತದೆ. ಟ್ಯಾಕ್ಸಿ ಮಾಡಿಕೊಂಡು ಗೆಳತಿಯರಿಬ್ಬರೂ ನಂದಿಯತ್ತ ಹೊರಡುತ್ತಾರೆ. ಹೊರಡುವಾಗಲೂ ಕಲಾವತಿ 'ಆರಾಮಾಗಿ ಹೋಗಿ ಬಾ ಋತು, ಜತೆಗೆ ಹೇಮಂತನನ್ನು ಮರೆತು ಬಿಡು' ಎನ್ನಲು ಮರೆಯುವುದಿಲ್ಲ.

ಋತುವಿನ ಮೇಲೆ ವಾತ್ಸಲ್ಯದ ಮಳೆ ಸುರಿಸಿದಂತೆ ಇಷ್ಟು ವರ್ಷ ನಟಿಸಿ ಆ ಮೂಲಕ ಆಸ್ತಿಯನ್ನು ಅನುಭವಿಸಬಹುದೆಂದು ಕಲಾವತಿ ಲೆಕ್ಕಾಚಾರ ಹಾಕಿರಬೇಕು. ಋತು ಮದುವೆಯಾಗದೇ ಉಳಿದಿದ್ದರೆ ಎಲ್ಲವೂ ಆಕೆ ಅಂದುಕೊಂಡಂತೆಯೇ ನಡೆದಿರುತ್ತಿತ್ತು. ಆದರೆ ಯಾವಾಗ ಅವಳ ಹೇಮಂತ ಸಿಕ್ಕಿದನೋ ಆಗಲೇ ಎಂದೂ ನಡೆಯದ ವಿಪರೀತಗಳು ಕೋಟೆ ಬಂಗಲೆಯಲ್ಲಿ ನಡೆಯತೊಡಗಿವೆ. ಇದಕ್ಕೆಲ್ಲಾ ಕಾರಣ ಕಲಾವತಿಯೆಂದೇ ನಿಚ್ಚಳವಾಗತೊಡಗಿತು ರಮ್ಯಾಳಿಗೆ. ಈಗಲೂ ಋತುವಿನ ಮೇಲೆ ಕಣ್ಣಿಡಲು ಯಾರನ್ನೋ ಕಳುಹಿಸಿರಬೇಕು ಕಲಾವತಿ. ರಮ್ಯ ತನ್ನಲ್ಲೇ ತರ್ಕಿಸಿಕೊಂಡಳು.

ಸುತ್ತಲಿನ ಪರಿಸರವನ್ನು ಬೆರಗುಗಣ್ಣುಗಳಿಂದ ನೋಡುತ್ತಾ ಕುಳಿತಿದ್ದ ಗೆಳತಿ ಋತುವಿನತ್ತ ಅವಳ ದೃಷ್ಟಿ ಹರಿಯಿತು. ಮುಗ್ಧ ಹುಡುಗಿ....ಹಾಲಿನಂತಹ ಮನಸ್ಸು. ಯಾರಲ್ಲೂ ಕಪಟವನ್ನು ಕಾಣಲಾರದ ಅಮಾಯಕಳು. ಕಾಲೇಜಿನ ಸರಣಿ ಕೊಲೆಗಾರನ ಪತ್ತೆಯಾಗಿ ಬಿಟ್ಟರೆ ಸಾಕೆನಿಸಿತು ಅವಳಿಗೆ. ಚತುರನಾದ ಹೇಮಂತನ ಕೈ ಹಿಡಿದರೆ ಋತುವಿಗೂ ಒಂದು ರಕ್ಷಣೆ ಸಿಕ್ಕಿದಂತಾಗುತ್ತದೆ, ಜೊತೆಗೆ ಅವಳ ವಿವೇಚನೆಯೂ ಬೆಳೆಯುತ್ತದೆಯೆನಿಸಿತು. ದಿನೇ ದಿನೇ ಋತುವಿನ ಮೇಲೆ ತನಗೆ ಹೆಚ್ಚುತ್ತಿರುವ ಕಾಳಜಿಯನ್ನು ನೆನೆದು ಅವಳಿಗೇ ಆಶ್ಚರ್ಯವಾಯಿತು. ತನ್ನ ಈ ಮುದ್ದು ಗೆಳತಿ ಯಾವುದೇ ಅಪಾಯವಿಲ್ಲದೆ ಹೇಮಂತನನ್ನು ಸೇರಿದರೆ ಸಾಕೆನಿಸಿಬಿಟ್ಟಿತ್ತು ಅವಳಿಗೆ.

ಸುಮಾರು ಒಂದು ಗಂಟೆಯ ಪ್ರಯಾಣದ ನಂತರ ಅವರೀಗ ಹೈದರಾಬಾದ್ ರಸ್ತೆಯಲ್ಲಿ ಎಡ ತಿರುವು ತೆಗೆದುಕೊಂಡು ಮುಂದುವರಿದರು. ಈಗ ರಸ್ತೆ ಕಿರಿದಾಗತೊಡಗಿತ್ತು. ಎರಡೂ ಕಡೆಗಳಲ್ಲಿ ಅಲ್ಲಲ್ಲಿ ಮನೆಗಳು, ಹೊಲಗದ್ದೆಗಳು ಕಾಣತೊಡಗಿದ್ದವು. ಬಂಡೆಗಳಿಂದ ಆವೃತವಾಗಿರುವ ಪುಟ್ಟ ಪುಟ್ಟ ಗುಡ್ಡಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿದ್ದರೆ, ತೆಂಗಿನ ಸಾಲು ಮರಗಳೂ, ಕೋತಿಗಳ ಗುಂಪೂ ಎದುರಾಗತೊಡಗಿದ್ದವು. ಒಂದೆರಡು ಆಕರ್ಷಕ ವಿನ್ಯಾಸದ ಲಾಡ್ಜಿಂಗ್‌ಗಳು ಕಣ್ಣಿಗೆ ಬಿದ್ದವು. ಬಿಸಿಲು ಚುರುಕಾಗತೊಡಗಿತ್ತು. ಅಲ್ಲಲ್ಲಿ ಮೇಯುತ್ತಿದ್ದ ಹಸುಗಳ ಗುಂಪು....ಓಡಾಡುತ್ತಿರುವ ಕೋಳಿಗಳು ಆ ಪರಿಸರವನ್ನು ಮತ್ತಷ್ಟು ಗ್ರಾಮ್ಯವಾಗಿಸಿದ್ದವು.

ನಗರದಲ್ಲೇ ಹುಟ್ಟಿ ಬೆಳೆದ ಋತುವಿಗೆ ಇವೆಲ್ಲಾ ಹೊಸತು. ಆಗಾಗ ಪರಿವಾರದೊಂದಿಗೆ ಮುನ್ನಾರ್, ಮಡಿಕೇರಿ ಎಂದೆಲ್ಲಾ ಹೋಗಿದ್ದರೂ ರೆಸಾರ್ಟ್‌ಗಳಲ್ಲೇ ಕಳೆದುಬಿಡುತ್ತಿದ್ದುದರಿಂದ ಗ್ರಾಮಗಳ ಪರಿಚಯ ಅವಳಿಗೆ ಅಷ್ಟಿರಲಿಲ್ಲ. ಹಾಗಾಗಿ ಅಚ್ಚರಿಯನ್ನು ಕಂಡವಳಂತೆ ಹೊರಗಿನ ದೃಶ್ಯಗಳತ್ತ ಕಣ್ಣು ನೆಟ್ಟಿದ್ದಳು.

ಅದೇ ರಸ್ತೆಯಲ್ಲಿ ಅರ್ಧ ಗಂಟೆ ಮುಂದುವರಿದು ಕಾರು ಬಲ ತಿರುವು ತೆಗೆದುಕೊಂಡಿತ್ತು. ಎಡಭಾಗದ ರಸ್ತೆ ಉದ್ದಕ್ಕೆ ಹಾದುಹೋಗಿತ್ತು. 'ಎಡಗಡೆ ರಸ್ತೇಲಿ ಹೋದ್ರೆ ನಂದಿಬೆಟ್ಟಕ್ಕೆ ಹೋಗ್ಬಹುದು ಋತು, ಬಲಗಡೆಗೆ ಹೋದ್ರೆ ನಮ್ಮೂರು ನಂದಿ ಸಿಗುತ್ತೆ, ಎಷ್ಟೋ ಜನ್ರಿಗೆ ನಂದಿಬೆಟ್ಟ ಗೊತ್ತು, ಆದ್ರೆ ಕೆಳಭಾಗದಲ್ಲೇ ಇರುವ ನಂದಿ ಊರಿನ ಬಗ್ಗೆ, ಅಲ್ಲಿನ ಪ್ರಾಚೀನ ನಂದಿ ದೇವಾಲಯದ ಬಗ್ಗೆ ಗೊತ್ತಿಲ್ಲ ನೋಡು...' ಎಂದಳು ರಮ್ಯ.

ಮುಂಭಾಗದಲ್ಲೇ ನಂದಿಬೆಟ್ಟ ಭವ್ಯವಾಗಿ ನಿಂತಿತ್ತು. ಬಲಭಾಗದಲ್ಲಿ ಸಾಗತೊಡಗಿದಂತೆ ದೊಡ್ಡ ದೊಡ್ಡ ಕಲ್ಲು ಬಂಡೆಗಳು, ಗುಡ್ಡಗಳು ಕಂಡು ಬಂದವು. ಹಾಗೆಯೇ ನಂದಿ ಊರೂ ಹತ್ತಿರವಾಯಿತು. ಬಸ್‌ಸ್ಟ್ಯಾಂಡ್ ಎಂದು ಕರೆಸಿಕೊಳ್ಳುವ ಜಾಗದಲ್ಲಿ ಕೆಲವು ಸಣ್ಣ ಸಣ್ಣ ಹೋಟೆಲ್ಲುಗಳು, ಅಂಗಡಿ ಮುಂಗಟ್ಟುಗಳು ಕಂಡು ಬಂದವು. ಹಾಗೆಯೇ ಮುಂದುವರಿದಂತೆ ಎಡಭಾಗದಲ್ಲಿ ದೇವಾಲಯದ ಗೋಪುರ ಕಣ್ಣಿಗೆ ಬಿತ್ತು.

'ಅದೇ ಋತು ನಂದಿ ದೇವಸ್ಥಾನ. ಸಾವಿರ ವರ್ಷಗಳಿಗಿಂತಲೂ ಪ್ರಾಚೀನವಾದ ದೇವಾಲಯವಂತೆ ಅದು, ನಿಂಗೆ ಅದು ಖಂಡಿತಾ ಇಷ್ಟವಾಗುತ್ತೆ...' ಎಂದ ರಮ್ಯಾಳ ದೃಷ್ಟಿಗೆ ಆ ಕಪ್ಪು ಕಾರು ತಮ್ಮನ್ನು ಹಿಂಬಾಲಿಸುತ್ತಲೇ ಇರುವುದರ ಅರಿವಾಯಿತು. ಬಹುಶಃ ತಾವೆಲ್ಲಿ ಉಳಿಯುತ್ತೇವೆಂದು ತಿಳಿದುಕೊಳ್ಳುವ ಹುನ್ನಾರವಿರಬೇಕು, ಅದರ ಬಗ್ಗೆ ಮತ್ತೆ ಯೋಚಿಸಬಹುದೆಂದುಕೊಂಡಳು.

ಅವರೀಗ ಸ್ವಲ್ಪ ಮುಂದೆ ಸಾಗಿ ರಮ್ಯಾಳ ಅಣತಿಯಂತೆ ಎಡಭಾಗದಲ್ಲಿ ಚಲಿಸತೊಡಗಿದ್ದರು. ಅಲ್ಲಲ್ಲಿ ಕುರುಚಲು ಗಿಡಗಳು, ಮನೆಗಳನ್ನು ದಾಟಿದ ಮೇಲೆ ಚಿಕ್ಕದಾದ ಪೊಲೀಸ್ ಸ್ಟೇಷನ್ನೊಂದು ಕಣ್ಣಿಗೆ ಬಿತ್ತು. ಅದನ್ನು ದಾಟಿ ಸ್ವಲ್ಪ ಮುಂದುವರಿದು ಕಾರು ಎಡ ತಿರುವನ್ನು ಪಡೆದುಕೊಂಡು ನಾಲ್ಕಾರು ಮನೆಗಳನ್ನು ದಾಟಿ ಒಂದೆಡೆ ನಿಂತಿತು.

ತಾನೇ ಕೆಳಗಿಳಿದು ಎದುರು ಕಂಡ ದೊಡ್ಡ ಗೇಟನ್ನು ತೆಗೆದಳು ರಮ್ಯ. ಹಾಗೆ ತೆರೆದವಳು ಹಿಂದಿರುಗಿ ನೋಡಿದಳು. ಅವರನ್ನು ಹಿಂಬಾಲಿಸುತ್ತಿದ್ದ ಕಪ್ಪು ಕಾರು ಎಲ್ಲಿಯೂ ಕಾಣಲಿಲ್ಲ. ಅಂದರೆ ತನ್ನ ಊಹೆ ಸರಿಯಾಗಿದೆ....ತಾವೆಲ್ಲಿ ಇಳಿಯುತ್ತಿದ್ದೇವೆಂದು ನೋಡಿಕೊಂಡು ವ್ಯಕ್ತಿ ಹೊರಟು ಹೋಗಿದ್ದಾನೆ. ಹಾಗಾದರೆ ಋತು ತಮ್ಮೂರಿನಲ್ಲಿ ಇರುವ ತನಕವೂ ಅವಳ ಚಲನವಲನಗಳನ್ನು ಆತನು ಗಮನಿಸುತ್ತಾನೆಂದಾಯಿತು. ಸಮಯ ನೋಡಿ ಈ ಬಗ್ಗೆ ಅವಳ ಹತ್ತಿರ ಮಾತನಾಡಬೇಕೆಂದುಕೊಂಡಳು.

ತನಗೆ ಅವಸರದ ಕೆಲಸವಿದೆಯೆಂದು ಟ್ಯಾಕ್ಸಿ ಡ್ರೈವರ್ ಹೊರಟೇ ಹೋದ. ಪ್ರಯಾಣದ ಅವಧಿಯಲ್ಲಿ ತಾನಾಯಿತು, ತನ್ನ ಕೆಲಸವಾಯಿತು ಎಂಬಂತಿದ್ದ ಆತನ ಸಭ್ಯತೆ ಇಬ್ಬರಿಗೂ ಮೆಚ್ಚುಗೆಯಾಯಿತು.

ಗೇಟಿನೊಳಗೆ ಅಡಿಯಿಟ್ಟ ಋತುವಿನ ಕಣ್ಣುಗಳು ಸುತ್ತಲಿನ ಪರಿಸರವನ್ನು ನೋಡಿ ಅರಳಿದವು. ಅವರೊಂದು ಮಾವಿನ ತೋಪಿನ ಒಳಗಿದ್ದರು. ಕಣ್ಣು ಹಾಯಿಸಿದಷ್ಟೂ ದೂರ ದೊಡ್ಡ ದೊಡ್ಡ ಮಾವಿನ ಮರಗಳೇ ಕಾಣುತ್ತಿದ್ದವು. ಎದುರಿಗೆ ಕೆಂಪು ಇಟ್ಟಿಗೆಗಳನ್ನು ಬಳಸಿ ಕಲಾತ್ಮಕವಾಗಿ ಕಟ್ಟಿದ್ದ ಸುಂದರ ಮನೆಯೊಂದು ಕಂಡಿತು, ನಾನಾ ತರಹದ ಹೂ ಗಿಡಗಳನ್ನು ಮನೆಯ ಮುಂದೆ ಬೆಳೆಸಲಾಗಿತ್ತು. ತಟ್ಟನೆ ನೋಡಿದರೆ ಆಶ್ರಮವೊಂದರ ನೆನಪನ್ನು ಆ ಮನೆ ಹೊತ್ತು ತಂದಿತ್ತು.

ಕೋಟೆಬಂಗಲೆಯಲ್ಲಿ ಕಾಣದ ಯಾವುದೋ ಒಂದು ಪ್ರಶಾಂತ ಭಾವವನ್ನು ಅನುಭವಿಸಿದಳು ಋತು. ಪ್ರಕೃತಿ ಹೊಳೆಯುವ ಅಕ್ಷರಗಳಲ್ಲಿ ಮುದ್ದಾದ ಹೆಸರು ಕಂಡಿತು.

ಕಾಲಿಂಗ್ ಬೆಲ್ ಒತ್ತಿದಾಗ 55–60 ರ ವಯಸ್ಸಿನ ವ್ಯಕ್ತಿಯೊಬ್ಬ ಬಾಗಿಲು ತೆರೆದು. ಅರೆ ಬೊಕ್ಕ ತಲೆ, ಅರೆಬರೆ ಬೆಳ್ಳಗಾದ ಪೊದೆ ಮೀಸೆ, ಉದ್ದ ಮುಖದ ಪುಟ್ಟ ಕಂಗಳ ಆಸಾಮಿ....ಅಷ್ಟೇನೂ ಎತ್ತರವಿಲ್ಲದ ಕುಳ್ಳಗಿನ ವ್ಯಕ್ತಿ. ಅವನುಟ್ಟಿದ್ದ